**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**ಫೌಜದಾರಿ ಪ್ರಕರಣ ಸಂಖ್ಯೆ: 615/2015**

**ಸರಕಾರದ ಪರವಾಗಿ ಃ ಪೋಲೀಸ್ ಠಾಣೆ ಸೇಡಂ**

//ವಿರುದ್ಧ//

**ಆರೋಪಿ :** ಸುಜಾರಾಮ ತಂದೆ ನೀತಿರಾಮ ಸೋಳಂಕಿ
ವಃ 48 ವರ್ಷ, ಉಃ ಕಿರಾಣಿ ವ್ಯಾಪಾರ
ಸಾಃ ಡಿ.ಬಿ.ಆರ್. ಕಂಪೌಂಡ್ ಮಾತೃಛಾಯ ಶಾಲೆಯ ಹತ್ತಿರ, ಸೇಡಂ
ತಾಃ ಸೇಡಂ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.5/ಪ್ರಾಸಾ.1 ಬಾಬು ತಂದೆ ನಾಗಪ್ಪ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 26.12.2024 ರಂದು, ಇವರು ಸನ್ 2011 ರಿಂದ 2017 ರವರೆಗೆ ಸೇಡಂ ಪೋಲೀಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ, ಹೀಗಿರುವಾಗ ದಿ. 24.12.2013 ರಂದು ಇವರು ಮತ್ತು ಚಾಸಾ.4 ರವರು ಪೋಲಿಸ ಠಾಣೆ ಕರ್ತವ್ಯದಲ್ಲಿದ್ದಾಗ ಚಾಸಾ.10 ರವರು ಕರ್ನಾಟಕ ಪ್ರೊವಿಸನಲ್ ಜನರಲ ಸ್ಟೋರ ಅಂಗಡಿಯಲ್ಲಿ ನಕಲಿ ಜಂಡುಬಾಂಬ ತನ್ನ ಅಂಗಡಿಯಲ್ಲಿ ಇಟ್ಟುಕೊಂಡು ಅವುಗಳನ್ನು ವ್ಯಾಪಾರ ಮಾರುತ್ತಿದ್ದಾರೆ ಅಂತಾ ದಾಳಿ ಮಾಡಬೇಕಾಗಿ ತಿಳಿಸಿರುತ್ತಾರೆ, ನಂತರ ಕೂಡಲೇ ಇವರು ಮತ್ತು ಚಾಸಾ.4, ಚಾಸಾ.10 ರವರೊಂದಿಗೆ ಸದರಿ ಜನರಲ ಸ್ಟೋರಗೆ ಹೋಗಿ ನೋಡಲಾಗಿ ಜಂಡುಬಾಂಬ ಕಂಪನಿಯವರು ಪರಿಶೀಲನೆ ಮಾಡಿ ಸದರಿ ಜಂಡುಬಾಂಬ ನಕಲಿ ಇದೆ ಎಂದು ಗುರುತಿಸಿರುತ್ತಾರೆ, ನಂತರ ಚಾಸಾ.10ರವರು ಚಾಸಾ.2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ಸದರಿ ನಕಲಿ ಜಂಡುಬಾಂಬ ಡಬ್ಬಿಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ, ನಂತರ ಇವರೆಲ್ಲರೂ ಪೋಲಿಸ ಠಾಣೆಗೆ ಬಂದಿರುತ್ತಾರೆ, ಸದರಿ ಅಂಗಡಿ ಮಾಲೀಕರಿಗೆ ಕೂಲಂಕುಷವಾಗಿ ವಿಚಾರಿಸಲಾಗಿ, ಸದರಿಯವರು ಎಲ್ಲಾ ಜಂಡುಬಾಂಬ ಡಬ್ಬಿಗಳನ್ನು ಬೇರೆಯವರು ತಂದುಕೊಟ್ಟಿರುತ್ತಾರೆ ತಾವು ಅವುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ, ಈ ಬಗ್ಗೆ ಇವರು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ಚಾಸಾ.10/ಪ್ರಾಸಾ.2 ಪರಸಪ್ಪ ತಂದೆ ಶಿವಪ್ಪ ವನಂಜಕರ್, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 08.01.2025 ರಂದು, ಇವರು ದಿಃ 10-12-2012 ರಿಂದ ದಿಃ 25-09-2014 ವರೆಗೆ ಸೇಡಂ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ, ಇವರು ದಿಃ 24-12-2013 ರಂದು ಮಧ್ಯಾಹ್ನ 03-00 ಗಂಟೆಗೆ ಇವರು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾಃ 1 ರವರು ಠಾಣೆಗೆ ಹಾಜರಾಗಿ

ಒಂದು ಲಿಖಿತ ದೂರನ್ನು ಸಲ್ಲಿಸಿದರು, ಸದರಿ ದೂರಿನ ಆಧಾರದ ಮೇಲೆ ಇವರ ಠಾಣೆಯ ಗುನ್ನೆ ನಂಬರ 260/2013 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟರು, ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾ ಸಾ 2 ಮತ್ತು 3 ರವರನ್ನು ಬರ ಮಾಡಿಕೊಂಡು ಅವರ ಸಮಕ್ಷಮ ಆರೋಪಿತರ ಕಿರಾಣಿ ಅಂಗಡಿಯಲ್ಲಿರುವ 390 ಜಂಡೂ ಬಾಂಬ್ ಡಬ್ಬಿಗಳ ಪಂಚನಾಮೆಯನ್ನು ಸಂಜೆ 04-15 ರಿಂದ 04-45 ರವರೆಗೆ ಜರುಗಿಸಿರುತ್ತಾರೆ, ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ, ನಂತರ ಘಟನಾ ಸ್ಥಳದ ಪಂಚನಾಮೆಯನ್ನು ಚಾ ಸಾ 2 ಮತ್ತು 3 ರವರ ಸಮಕ್ಷಮ ಸಾಯಂಕಾಲ 05-30 ರಿಂದ 06-00 ರ ವರೆಗೆ ಜರುಗಿಸಿರುತ್ತಾರೆ, ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ, ಅದೇ ದಿನ ಚಾ ಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ, ದಿ.18-02-2014 ರಂದು emami ಕಂಪನಿದವರು ಒಂದು ವರದಿಯನ್ನು ಸಲ್ಲಿಸಿರುತ್ತಾರೆ ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ, ದಿ. 25-12-2013 ರಂದು ಸದರಿ ಪ್ರಕರಣದ ಆರೋಪಿತನಿಗೆ ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ, ನಂತರ ವರ್ಗಾವಣೆ ಗೊಂಡಿರುವುದರಿಂದ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ ಸಾ 11 ರವರಿಗೆ ವಹಿಸಿಕೊಟ್ಟಿರುತ್ತಾರೆ, ಎಂದು ನುಡಿಯುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 4) ಚಾಸಾ.4/ಪ್ರಾಸಾ.4 ಸಿದ್ದಾರಾಮೇಶ್ವರ್ ತಂದೆ ಶಿವಶರಣಪ್ಪ, ತಮ್ಮ ಸಾಕ್ಷದಲ್ಲಿ ದಿನಾಂಕ 14.08.2025 ರಂದು, ಇವರು ಸನ್ 2010 ರಿಂದ 2015 ವರೆಗೆ ಸೇಡಂ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ, ಈ ಅವದಿಯಲ್ಲಿ ದಿಃ 24-12-2013 ರಂದು ಮಧ್ಯಾಹ್ನ 12-00 ಗಂಟೆಗೆ ಚಾ ಸಾ 1, 6 ಮತ್ತು 7 ರವರು ಠಾಣೆಗೆ ಬಂದು ಇಮಾಮಿ ಕಂಪನಿಯ ನಕಲಿ ಜಂಡೂಬಾಂಬ್ ಡಬ್ಬಿಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ದೂರು ಸಲ್ಲಿಸಿದ್ದಾರೆ, ನಂತರ ಇವರು ಕರ್ನಾಟಕ ಪ್ರಾವಿಷನ್ ಅಂಗಡಿಗೆ ಹೋಗಿ ವಿಚಾರಿಸಲಾಗಿ ಅದರಲ್ಲಿ ಒಟ್ಟು 360 ನಕಲಿ ಜಂಡೂಬಾಂಬ್ ಡಬ್ಬಿಗಳು ಕಂಡುಬಂದಿದ್ದು ಇರುತ್ತದೆ, ಅದರ ಅಂದಾಜು ಕಿಮ್ಮತ್ತು ರೂ.10,530/- ಇರುತ್ತದೆ, ಅದನ್ನು ಜಪ್ತಿ ಪಡಿಸಿಕೊಂಡು ಠಾಣೆಗೆ ತಂದು ಪಿ ಎಸ್ ಐ ಸಾಹೇಬರಿಗೆ ಒಪ್ಪಿಸಿದ್ದಾರೆ, ನಂತರ ಪಿ ಎಸ್ ಐ ಸಾಹೇಬರು ಗುನ್ನೆ ದಾಖಲಿಸಿಕೊಂಡಿದ್ದರು, ಈ ಬಗ್ಗೆ ಇವರು ಹೇಳಿಕೆ ನೀಡಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 5) ಚಾಸಾ.1/ಪ್ರಾಸಾ.6 ಮುಸ್ತಫಾ ತಂದೆ ಜಮಿರುದ್ದೀನ್ ಶೇಖ್, ತಮ್ಮ ಸಾಕ್ಷದಲ್ಲಿ ದಿನಾಂಕ 10.12.2025 ರಂದು, ಸಾಕ್ಷಿಯು ದೂರು ದಾಖಲಾತಿಯನ್ನು ನೋಡಿ ಗುರುತಿಸಿರುತ್ತಾರೆ, ದಿ. 24.12..2013 ರಂದು ಆರೋಪಿತನ ಅಂಗಡಿಯಲ್ಲಿ ನಕಲಿ ಜಂಡೂಬಾಂಬ್ ಬಾಟಲಿಗಳು ಇದ್ದವು, ಆಗ ಇವರು ನಕಲಿ ಜಂಡೂಬಾಂಬ ಡಬ್ಬಿಗಳನ್ನು ಹಿಡಿಯಲು ಹೋದಾಗ ಅಲ್ಲಿ ನಕಲಿ 390 ಜಂಡುಬಾಂಬ ಡಬ್ಬಿಗಳು ಸಿಕ್ಕಿತ್ತು, ಆಗ ಇವರು ಪೋಲೀಸರಿಗೆ ಪ್ರಕರಣ ದಾಖಲಿಸಲು ದೂರನ್ನು ಸಲ್ಲಿಸಿದರು, ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತಾರೆ, ನಂತರ ಪ್ರ ವ ವರದಿಯ ಪ್ರತಿಯನ್ನು ಪಡೆದುಕೊಂಡು ತಮ್ಮ ಕಂಪನಿಗೆ ಜಮಾ ಮಾಡಿರುತ್ತಾರೆ, ಇವರು ಘಟನಾ ನಡೆದ ಸಮಯದಲ್ಲಿ ಜಂಡುಬಾಂಬ್ ಕಂಪನಿಯಲ್ಲಿ ತನಿಖಾಧಿಕಾರಿಯಾಗಿ ಸೇವೆಯನ್ನು

ಸಲ್ಲಿಸುತ್ತಿದ್ದರು, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 6) ಚಾಸಾ.11/ಪ್ರಾಸಾ.7 ಬಾಪುಗೌಡ ತಂದೆ ಸಿದ್ದನಗೌಡ ಪಾಟೀಲ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.03.2026 ರಂದು, ಇವರು 01.10.2014 ರಿಂದ 08.06.2016 ವರೆಗೂ ಸೇಡಂ ಪಿ.ಎಸ್ನಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ, ದಿ.01.03.2015 ರಂದು ಚಾಸಾ.10 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು, ಅದೇ ದಿನ ಎಫ್ ಎಸ್ ಎಲ್ ಮಡಿವಾಳ ಬೆಂಗಳೂರಿನಿಂದ ವರದಿಯನ್ನು ಪಡೆದುಕೊಂಡಿರುತ್ತಾರೆ, ಆರೋಪಿತರ ವಿರುದ್ದ ಆರೋಪ ಸಾಬೀತಾಗಿರುವುದರಿಂದ ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 7) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 8) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 17-03-2026 ಪ್ರ.ದ. ನ್ಯಾ.ದಂ. ಸೇಡಂ.